ಅಸಲು ದಾವಾ 96/2018 ಪಿ ಡಬ್ಲೂಃ 1-ತುರಾಬ್ ಆಲಿ ಬೇಗ್

ಸಾಕ್ಷಿಯನ್ನು ದಿನಾಂಕಃ **10.08.2023** ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು**.**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

3. ಬಿ ಆಸ್ತಿಯ ಚಕ್ಕುಬಂದಿ ಹೇಳಬಹುದು. ಪೂರ್ವಕ್ಕೆ ಗೋರಿ, ಪಶ್ಚಿಮಕ್ಕೆ ಮಸೀದಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸರ್ಕಾರಿ ಜಾಗ ಇರುತ್ತದೆ. ಸಿ ಷೆಡ್ಯೂಲ್ ನ ಚಕ್ಕು ಬಂದಿ ಏನೆಂದರೆ ಸಾಕ್ಷಿದಾರರು ಎರಡಕ್ಕೂ ಒಂದೇ ಚಕ್ಕು ಬಂದಿ ಎನ್ನುತ್ತಾರೆ. ನಾವು ಅಂದರೆ 1 ರಿಂದ 6 ವಾದಿಗಳು ಸಂತೆಯಲ್ಲಿ ವ್ಯಾಪಾರ ಮಾಡುವುದಿಲ್ಲ. ನಮಗೆ ಸೇರಿದ ಯಾವುದೇ ಅಂಗಡಿ ಸಂತೆ ಮೈದಾನದಲ್ಲಿ ಇರುವುದಿಲ್ಲ. ನ್ಯಾಯಾಲಯದಿಂದ ನಿಯೋಗಿ ನೇಮಕವಾಗಿ ಸ್ಥಳ ಪರಿಶೀಲನೆ ಮಾಡುವುದರ ಬಗ್ಗೆ ನನಗೇನೂ ತಕರಾರು ಇರುವುದಿಲ್ಲ. ನಾನು ಊರಿನ ಮುಖಂಡನಲ್ಲವೆಂದರೆ ಸರಿ. ವಾದಿಗಳಲ್ಲಿ 2 ನೇ ವಾದಿ ಮುಖಂಡರಾಗಿದ್ದರು ಆದರೆ ಅವರು ಈಗ ತೀರಿಕೊಂಡಿದ್ದಾರೆ. ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಎ ಷೆಡ್ಯೂಲ್ ಆಸ್ತಿಯ ಭಾಗಗಳಲ್ಲ ಎಂದರೆ ಸರಿಯಲ್ಲ. ಸಂತೆ ಮೈದಾನದಲ್ಲಿ ಸುಮಾರು 35 ವರ್ಷದಿಂದ ಹಾಲಿನ ಡೈರಿ, ಗ್ರಾಮ ಪಂಚಾಯಿತಿ ಕಚೇರಿ ಇರುತ್ತದೆ. ಇವುಗಳ ಬಗ್ಗೆ ನಾವು ತಕರಾರು ಕೊಟ್ಟಿಲ್ಲ ಬೇರೆಯವರು ತಕರಾರು ಕೂಟ್ಟಿದ್ದರು. ಆ ಸಮಯದಲ್ಲಿ ನಾವು ಇರಲಿಲ್ಲ ಆದ್ದರಿಂದ ನಾವು ತಕರಾರು ಕೊಟ್ಟಿರಲಿಲ್ಲ. ಸಂತೆ ಮೈದಾನವನ್ನು ಸುಮಾರು ಜನ ಒತ್ತುವರಿ ಮಾಡಿದ್ದಾರೆ ಎಂದರೆ ಸರಿ. ಆ ರೀತಿ ಒತ್ತುವರಿ ಮಾಡಿ ಉಳಿದ ಜಾಗ 2 ಎಕರೆ 38 ಗುಂಟೆ ಖಾಲಿ ಇರುತ್ತದೆ. ಈ ಬಗ್ಗೆ ಅಳತೆ ಆಗಿಲ್ಲ, ಅಳತೆಗೆ ಅರ್ಜಿ ಕೊಡಲಾಗಿದೆ ಎನ್ನುತ್ತಾರೆ. ಈ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ, ಕೊಡುತ್ತೇವೆ. ನಾನು ದಾವೆಯಲ್ಲಿ ಎ ಯಿಂದ ಸಿ ಷೆಡ್ಯೂಲ್ ಆಸ್ತಿಗಳಿಗೆ ತಪ್ಪು ವಿಸ್ತೀರ್ಣ ಮತ್ತು ಚಕ್ಕುಬಂದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ವಿಳಾಸ ಕೂಡ ನಾವು ತಪ್ಪು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರು ಕೊಡುವಾಗ ಸ್ವಲ್ಪ ಹೆಚ್ಚು ಕಮ್ಮಿ ಆಗಿರಬಹುದು. 2 ನೇಯವರ ಹೆಸರು ಬರೀ ರುಮಾನ್ ಪಾಷಾ ಆಗಿರುತ್ತದೆ ಎಂದರೆ , ಅದು ಕೂಡ ಸ್ವಲ್ಪ ಹೆಚ್ಚು ಕಮ್ಮಿ ಆಗಿರಬಹುದು ಎನ್ನುತ್ತಾರೆ. 2 ನೇ ಪ್ರತಿವಾದಿಯ ತಂದೆಯ ಹೆಸರು ಅಬ್ದುಲ್ ಖುದೂಸ್ ಎಂದರೆ ಇರಬಹುದು. 3 ನೇ ಪ್ರತಿವಾದಿಯ ಹೆಸರು ಬರೀ ನದೀಮ್ ಪಾಷಾ ಎಂದರೆ ಅದು ಕೂಡ ಸ್ವಲ್ಪ ಹೆಚ್ಚು ಕಮ್ಮಿ ಆಗಿರಬಹುದು ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಅವರೆಲ್ಲರೂ ಸಹೋದರರಾಗಿದ್ದು ಒಂದೇ ಕುಟುಂಬದವರು ಎನ್ನುತ್ತಾರೆ. ನನ್ನ ಮಗನ ಹೆಸರು ಅಬ್ದುಲ್ ನದೀಮ್ ಆಲಿ ಬೇಗ್ ಆಗಿರುತ್ತದೆ. ಅವರು ರೀ ಸರ್ವೆ ಮಾಡಬೇಕೆಂದು ಹೇಳಿ ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯ ಪ್ರಕಾರ ರಿ ಸರ್ವೆ ಆಗಿರುವುದಿಲ್ಲ.

4. ನಾವು ಸಂತೆ ಮೈದಾನದಲ್ಲಿ ಇರುವ ಒತ್ತುವರಿಯನ್ನು ತೆಗೆಯಲು ಅರ್ಜಿಕೊಟ್ಟಿದ್ದೆವು ಎಂದರೆ ಸರಿ. ಸದರಿ ಒತ್ತುವರಿಯನ್ನು 10-12 ಜನ ಮಾಡಿದ್ದಾರೆ. ಅವರು ಈ ಮೊದಲೇ ಕಟ್ಟಡ ಮಾಡಿದ್ದರಿಂದ ಅರ್ಜಿ ಕೊಟ್ಟಿರುವುದಿಲ್ಲ. ಎದುರುದಾರರು ಕಟ್ಟಡ ಕಟ್ಟುತ್ತಿದ್ದುರಿಂದ ದಾವೆ ಮಾಡಿದ್ದೇವೆ. ಉಳಿದವರು ಈ ಮೊದಲೇ ಕಟ್ಟಡ ಮಾಡಿದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಭಾವ ಚಿತ್ರದಲ್ಲಿ ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಕಾಣಿಸುತ್ತವೆ. ದಾವೆಯ ಜೊತೆ ಸಲ್ಲಿಸಲಾಗಿರುವ ಕಚ್ಚಾ ನಕಾಶೆಯಲ್ಲಿ ಪಶ್ಚಿಮಕ್ಕೆ ಆಗಸ್ ಆಲಿ ಬೇಗ್ ಅಂದರೆ 6 ನೇ ವಾದಿಯ ಜಾಗ ಇದೆ ಎಂದು ಹೇಳಿದ್ದೇವೆ. ಆ ರೀತಿ ನಾವು ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಎನ್ ಆರ್ ಅಬ್ದುಲ್ ರಶೀದ್ ರವರು ಜಾಗ ಇರುತ್ತದೆ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಮಹದೇವರವರ ಶೆಡ್ ಹೋಟೆಲ್ ತೋರಿಸಿದ್ದೇವೆ ಎಂದರೆಸರಿ. ಸದರಿ ಹೋಟೇಲ್ ಇರುವ ಜಾಗ ಎನ್ ಆರ್ ಅಬ್ದುಲ್ ರಶೀದ್ ರವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಆ ಜಾಗವನ್ನು ರಶೀದ್ ರವರು

ಮಹದೇವ್ ರವರಿಗೆ ಹೋಟೇಲ್ ನಡೆಸಲು ಕೊಟ್ಟಿದ್ದರೆ ಎಂದರೆ ಸರಿ. ನಾನು ನಕ್ಷೆಯಲ್ಲಿ ರುಮಾನ್ ಪಾಷಾ ಎಂದು ತೋರಿಸಿರುವ ಜಾಗವನ್ನು ಕ್ಷೌರಿಕ ಅಂಗಡಿಗೆ ರುಮಾನ್ ಪಾಷಾ ರವರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಂಗಡಿಯನ್ನು ಇಟ್ಟಿಗೆಯಿಂದ ಕಟ್ಟಿ ಮೇಲೆ ಶೀಟನ್ನು ಹಾಕಲಾಗಿದೆ ಎಂದರೆ ಸರಿ. ನದೀಮ್ ಪಾಷಾ ರವರು ಟೀ ಹೋಟೇಲ್ ನಡೆಸುತ್ತಾರೆ ಎಂದರೆ ಸರಿ. ಅವರು ಅಂಗಡಿಯನ್ನು ಇಟ್ಟಿಗೆಯಿಂದ ಕಟ್ಟಿ ಮೇಲ್ಛಾವಣಿಗೆ ಶೀಟ್ ಹೊದಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಅಕ್ರಮವಾಗಿ ಕಟ್ಟಿದ್ದಾರೆ ಎನ್ನುತ್ತಾರೆ. ಈ ರೀತಿ ಅಕ್ರಮವಾಗಿ ಕಟ್ಟಿ 5 ವರ್ಷ ಆಗಿರುತ್ತದೆ. 1 ನೇ ಪ್ರತಿವಾದಿ ಆ ಜಾಗದಲ್ಲಿ 25 ವರ್ಷದಿಂದ ಗೊಬ್ಬರದ ಅಂಗಡಿ ನಡೆಸುತ್ತಿದ್ದಾರೆ ಎಂದರೆ ಸರಿ. ಪರವಾನಿಗೆ ತೆಗೆದುಕೊಂಡಿದ್ದಾರೆ ಎಂದರೆಸರಿ. ಸಿ ಷೆಡ್ಯೂಲ್ ನಲ್ಲಿ ತೋರಿಸಿರುವ ಉತ್ತರದ ಬೇಸ್ ಮೆಂಟ್ 1 ನೇ ಪ್ರತಿವಾದಿಗೆ ಎನ್ ಆರ್ ಅಬ್ದುಲ್ ಸಲಾಮ್ ರವರಿಂದ ಬಾಯಿ ಮಾತಿನ ದಾನದ ಮುಖಾಂತರ ಬಂದಿದೆ ಎಂದರೆ ಸರಿಯಲ್ಲ. ದಕ್ಷಿಣದ ಭಾಗ ಅವರಿಗೆ ಅವರ ತಂದೆಯಿಂದ ವಾರಸು ಮುಖಾಂತರ ಬಂದಿರುತ್ತದೆ ಎಂದರೆ ಸರಿಯಲ್ಲ. ಸಂತೆ ಮೈದಾನದಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಒಂದು ರಸ್ತೆ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ಸಂತೆ ಮೈದಾನದ ದಕ್ಷಿಣಕ್ಕೆ ಬೆಂಗಳೂರು ಮೈಸೂರು ರಸ್ತೆ ಇದೆ ಎಂದರೆ ಸರಿ. ಅದರ ಉತ್ತರಕ್ಕೂ ಕೂಡ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಪೂರ್ವದ ಕಡೆಗೆ ಮಶೀದಿ ಮತ್ತು ದರ್ಗಾದ ಕಡೆ ಹೋಗುತ್ತದೆ ಎಂದರೆ ಸರಿ. ಅದೇ ರಸ್ತೆ ಪಶ್ಚಿಮದ ಕಡೆಗೆ ಹಳ್ಳಿಗಳಿಗೆ ಹೋಗುತ್ತದೆ ಎಂದರೆ ಸರಿ. ಸಂತೆ ಮೈದಾನದ ಮದ್ಯದಲ್ಲಿ ಒಂದು ರಸ್ತೆ ಇರುತ್ತದೆ ಎಂದರೆ ಸುಳ್ಳು , ಅದು ದಕ್ಷಿಣದಲ್ಲಿ ಮದ್ಯದಲ್ಲಿ ಪ್ರಾರಂಭವಾಗಿ ಉತ್ತರದಲ್ಲಿ ಸಂತೆ ಮೈದಾನದ ಅಂಚಿನಲ್ಲಿ ಹಾದು ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯಿಂದ ಪಶ್ಚಿಮಕ್ಕೆ ಉತ್ತರಕ್ಕಾದಂತೆ ಸಂತೆ ಮೈದಾನದ ಜಾಗ ಇಲ್ಲವೆಂದರೆ ಸರಿಯಲ್ಲ. ದಕ್ಷಿಣ ಭಾಗದ ಪಶ್ಚಿಮಕ್ಕೆ ಸಂತೆ ಮೈದಾನದ ಜಾಗ ಇದೆ ಎಂದರೆ ಸರಿ. ಸಾಕ್ಷಿ ಅದಕ್ಕೆ ನಾವು ತಕರಾರು

ಮಾಡಿದ್ದೇವೆ ಎನ್ನುತ್ತಾರೆ. ಸಂತೆ ಮೈದಾನದ ದಕ್ಷಿಣ ದಿಕ್ಕಿನಲ್ಲಿ ಪಶು ವೈದ್ಯ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಪಶು ಆಸ್ಪತ್ರೆಯ ಪೂರ್ವಕ್ಕೆ ಒಂದು ನಂದಿನಿ ಕ್ಯಾಂಟೀನ್ ಇದೆ ಎಂದರೆ ಸರಿ. ನಂದಿನಿ ಕ್ಯಾಂಟೀನ್ ಪೂರ್ವಕ್ಕೆ ನಾಥಪ್ಪ ಎನ್ನುವವರ ಹೋಟೇಲ್ ಇದೆ ಎಂದರೆ ಸರಿಯಲ್ಲ. ಸಾಕ್ಷಿ ನಾತಪ್ಪ ಎನ್ನುವವರು ಇರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಅಕ್ರಮವಾಗಿ ಯಾರ್ಯಾರೋ ಕಟ್ಟಿ ಕೊಂಡಿದ್ದಾರೆ ಎನ್ನುತ್ತಾರೆ. ಅದರಿಂದ ಪೂರ್ವಕ್ಕೆ ಎ ಪಿ ಎಂ ಸಿ ಗೋಡನ್ ಇದೆ ಎನ್ನುತ್ತಾರೆ. ಸದರಿ ಗೋಡನ್ ಕೂಡ ಸಂತೆ ಮೈದಾನಕ್ಕೆ ಸೇರಿದ ಜಾಗವಾಗಿರುತ್ತದೆ. ರಸ್ತೆಯ ಪಶ್ಚಿಮಕ್ಕೆ ಮಿಲ್ಕ್ ಡೈರಿ ಇರುತ್ತದೆ ಎಂದರೆ ಅದು ಹೈವೇ ರಸ್ತೆಗೆ ಹೊಂದಿಕೊಂಡಂತೆ ಇದೆ ಎನ್ನುತ್ತಾರೆ. ಅದರ ಪಶ್ಚಿಮಕ್ಕೆ ಸರ್ಕಾರದ ಲೈಬ್ರರಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹಾಲಿ ನ ಡೈರಿ ಪಕ್ಕ ಲೈಬ್ರರಿ ಇದೆ ಎನ್ನುತ್ತಾರೆ. ಸಿದ್ದಪ್ಪ ಎಂಬುವವರು ಅಕ್ರಮವಾಗಿ ಸಂತೆ ಮೈದಾನದಲ್ಲಿ ಮನಬೆ ಕಟ್ಟಿದ್ದಾರೆ ಎಂದರೆ ಅವರು ಯಾರೆಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಂತೆ ಮೈದಾನದಲ್ಲಿ ಒಂದು ಸಣ್ಣದಾದ ಆಂಜನೇಯನ ಗುಡಿ ಇದೆ ಎಂದರೆ ಸರಿ. ಸ್ಕೂಟರ್ ಗ್ಯಾರೇಜ್, ತಕರಾರಿ ಅಂಗಡಿ, ಕೋಳಿ ಅಂಗಡಿ ಇರುತ್ತವೆ ಎಂದರೆ ಸಾಕ್ಷಿದಾರರು ಪಂಚಾಯಿತಿಯವರು ಬಾಡಿಗೆಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಯಾವಾಗಿಂದ ಬಾಡಿಗೆಗೆ ಕೊಟ್ಟಿದ್ದಾರೆ ಗೊತ್ತಿಲ್ಲ. ಸಂತೆಯ ದಿನ ಬಾಡಿಗೆ ವಸೂಲಿ ಮಾಡುತ್ತಾರೆ ಎನ್ನುತ್ತಾರೆ. ನಕ್ಷೆಯಲ್ಲಿ ನಾನು ಪ್ರತಿವಾದಿಗಳ ಸ್ವಂತ ಜಾಗ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಯಾವುದೇ ಒತ್ತುವರಿಯ ಬಗ್ಗೆ ನಾನು ನನ್ನ ನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ.

5. 6 ನೇ ವಾದಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೊದಲು ಒಂದು ದಾವೆ ಮಾಡಿದ್ದರು ಎಂದರೆ ಸರಿ. ಅದರ ನಂಬರ್ 341/2018 ಎಂದರೆ ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ನಾವು ನಮ್ಮನ್ನು ಸೇರ್ಪಡೆ ಮಾಡಲು ಅರ್ಜಿ ಸಲ್ಲಿಸಿದ್ದೆವು ಎಂದರೆ

ಸರಿಯಲ್ಲ. ಅದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಅವರು ಸಂತೆ ಮೈದಾನದ ಜಾಗ ಅವರದು ಎಂದು ಹೇಳಿ ದಾವೆ ಮಾಡಿದ್ದರು ಎಂದರೆ ಸರಿ. ಅವರು ಅವರ ಸ್ವಂತ ಜಾಗಕ್ಕೆ ಸದರಿ ದಾವೆ ಮಾಡಿದ್ದರು. ಅದು ಸಂತೆ ಮೈದಾನದ ಜಾಗ ಎಂದು ಹೇಳಿ ನಾವು ನಮ್ಮನ್ನು ಸೇರ್ಪಡೆ ಮಾಡಲು ಅರ್ಜಿಯನ್ನು ಹಾಕಿದ್ದೆವು ಎಂದರೆ ಸರಿಯಲ್ಲ.ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ಅಂದರೆ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ. ಸಾಕ್ಷಿ ಒಪ್ಪಿದ್ದರಿಂದ ಸದರಿ ಅರ್ಜಿ ಮತ್ತು ಪ್ರಮಾಣ ಪತ್ರವನ್ನು ನಿಡಿಃ 1 ಎಂದು ಗುರುತಿಸಲಾಯಿತು. ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಎ ಷೆಡ್ಯೂಲ್ ಆಸ್ತಿಗಳಿಗೆ ಸೇರಿರಲಿಲ್ಲ ಅಂದರೆ ಸಂತೆ ಮೈದಾನಕ್ಕೆ ಸೌರಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಸರ್ಕಾರಕ್ಕೆ ಪಂಚಾಯಿತಿಗೆ ಅಥವಾ ಯಾವುದೇ ಖಾಸಗೀ ವ್ಯಕ್ತಿಗಳಿಗೆ ಸಂತೆ ಮೈದಾನದಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಉತ್ತರಕ್ಕೆ ತೋರಿಸಿರುವ ಅಂಗಡಿ 2 ನೇ ಪ್ರತಿವಾದಿಗೆ ಸೇರಿದ ಅಂಗಡಿ ಎಂದರೆ ಸರಿಯಲ್ಲ. ಕ್ಷೌರಿಕ ಅಂಗಡಿಯವರಿಗೆ ಬಾಡಿಗೆಗೆ ಕೊಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ನದೀಮ್ ಪಾಷಾ ರವರಿಗೆ ಸೇರಿದ ಜಾಗ ಎಂದು ತೋರಿಸಿರುವ ಜಾಗ ಮಕದಾರ್ ಪಾಷಾ ಅಂದರೆ 1 ನೇ ಪ್ರತಿವಾದಿಗೆ ಸೇರಿದ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ದಕ್ಷಿಣದ ಅಂಗಡಿ 1 ನೇ ಪ್ರತಿವಾದಿಗೆ ಅವರ ತಂದೆಯಿಂದ ಬಂದಿದೆ ಎಂದರೆ ಸರಿಯಲ್ಲ. ನಕ್ಷೆಯಲ್ಲಿತೋರಿಸಿರುವ 3 ಅಂಗಡಿಗಳನ್ನುಕಟ್ಟಿ ಸುಮಾರು 30 ವರ್ಷಕ್ಕೂ ಹೆಚ್ಚು ವರ್ಷಗಳಾಗಿವೆ ಎಂದರೆ ಸರಿಯಲ್ಲ. ಆಗದ್ ಆಲಿ ಬೇಗ್ ಅಂದರೆ 6 ನೇ ವಾದಿಗೆ ಸೇರಿದ್ದು ಎಂದು ಹೇಳುವ ಜಾಗ ಅಬ್ದುಲ್ ರಶೀದ್ ರವರಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸಿ ಷೆಡ್ಯೂಲ್ ಆಸ್ತಿಯ ಉತ್ತರದ ಬೇಸ್ ಮಂಟ್ ಅನ್ನು ಅವರ ಚಿಕ್ಕಪ್ಪ ದಾನವಾಗಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದನ್ನು ಅವರು ರಂಜಾನ್ ಟೈಮ್ನಲ್ಲಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಮೌಖಿಕ ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ

ಅದು ಪಂಚಾಯಿತಿ ಜಾಗ ಅನ್ನುತ್ತಾರೆ. ಅವರು ಅಂಗಡಿ ಕಟ್ಟಲು ಪರವಾನಿಗೆ ಪಡೆದಿದ್ದಾರೆ ಎಂದರೆ ಸರಿ. ಸಾಕ್ಷಿ ಅಕ್ರಮವಾಗಿ ಪರವಾನಿಗೆ ಪಡೆದಿದ್ದರು. ನಾವು ಪ್ರಶ್ನೆ ಮಾಡಿದ ಕಾರಣ ರದ್ದು ಮಾಡಿದ್ದಾರೆ ಎನ್ನುತ್ತಾರೆ. ದಾವೆ ದಾಖಲು ಮಾಡುವ ಕಾಲಕ್ಕೆ ಪ್ರತಿವಾದಿಗಳು ಬೇಸ್ ಮೆಂಟ್ ಹಾಕಿ ಪಿಲ್ಲರ್ ಗಳನ್ನು ನಿಲ್ಲಿಸಿದ್ದರು ಎಂದರೆ ಸರಿಯಲ್ಲ. ವಾದಿ 6 ರವರು ಸಲ್ಲಿಸಿದ ದಾವೆಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆಯು ಸಿಗದ ಕಾರಣ ಈ ದಾವೆಯನ್ನು ನಾವು ಮಾಡಿದ್ದೇವೆ ಎಂದರೆ ಸರಿಯಲ್ಲ. 6 ನೇ ವಾದಿ ನನ್ನ ಸ್ವಂತ ಅಣ್ಣನ ಮಗನಾಗಿದ್ದಾನೆ ಎಂದರೆ ಸರಿ. ನಿಪಿಃ 16 ರಲ್ಲಿ ಪ್ರತಿವಾದಿಯ ಅಂಗಡಿಗಳು ಕಾಣಿಸುತ್ತವೆ ಎಂದರೆ ಸರಿ. ನಿಪಿಃ 17 ಮತ್ತು 18 ರಲ್ಲಿ ಪ್ರತಿವಾದಿಗಳು ಕಟ್ಟಿರುವ ಕಟ್ಟಡದ ಪಿಲ್ಲರ್ ಗಳು ಕಂಡು ಬರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ. ಹೇ.ಕೇ.** ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.